# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 542 / 2017

ಸಿಡಬ್ಲ್ಯೂ- **13**
ಪಿಡಬ್ಲ್ಯೂ-**06**

ದಿನಾಂಕಃ **16.10.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಮೋನಪ್ಪ |
| ತಂದೆಯ/ಗಂಡನ ಹೆಸರುಃ | - | ಸಾಬಣ್ಣ |
| ವಯಸ್ಸುಃ | -? | **47** ವರ್ಷ |
| ಉದ್ಯೋಗಃ | - | ಮುಖ್ಯ ಪೊಲೀಸ್ ಪೇದೆ ಯಾದಗಿರಿ ನಗರ ಪೋ.ಠಾಣೆ ಯಾದಗಿರಿ. |
| ವಾಸಸ್ಥಳಃ | - | ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಡಿಸೆಂಬರ್ 2016 ರಿಂದ ಇಲ್ಲಿಯ ವರೇಗೆ ನಾನು ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 25.07.2017 ರಂದು ರಾತ್ರಿ 8-30 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಬಂದು ಒಂದು ಲಿಖಿತ ದೂರು ನೀಡಿದ್ದರು. ಸದರಿ ದೂರಿನ ಸರಾಂಶದ ಮೇರೆಗೆ ಠಾಣೆಯ ಗುನ್ನಾ ಸಂಖ್ಯೆ 146/2017 ಭಾ.ದಂ.ಸಂ. 454, 457 ಮತ್ತು 380 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದೆ. ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೆ ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿದ್ದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎನ್.ರವರಿಂದಃ

ಆ ದಿನ ರಾತ್ರಿ 8-30 ಗಂಟೆಗೆ ಚಾಸಾ-1 ರವರು ಮಾತ್ರ ಠಾಣೆಗೆ ಬಂದಿದ್ದರು ಪ್ರ.ವ.ವರದಿಯಲ್ಲಿ ದೂರಿನ ತಡಕಾರಣವನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 25.07.2017 ರಂದು ಚಾಸಾ-1 ರವರು ಠಾಣೆಗೆ ಬಂದು ನನಗೆ ಲಿಖಿತ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣೆಯ ಪ್ರಕರಣವನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆಗಳ ಗೊಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.